

# ಕಗ್ಗತ್ತಲ ಕಾಲದ ಹಾಡು...

ಗೌರಿ

ಮನುಷ್ಯನ ನಡವಳಿಕೆಗಳು ಒಬ್ಬೊಬ್ಬರದು ಒಂದೊಂದು ಬಗೆ. ಅದು ಸನ್ನಿವೇಶ, ಸಂದರ್ಭಗಳಿಗನುಗುಣವಾಗಿ ಬದಲಾಗುತ್ತದೆ. ಆ ಬದಲಾವಣೆ ಮಾನವೀಯ ತಳಹದಿಯ ಸೂತ್ರದಲ್ಲಿ ಇರಬೇಕು ಎಂಬುದು ನಾಗರಿಕ ಸಮಾಜದ ಮೂಲ ಆಶಯ. ಈ ಬಹುರೂಪ ಗುಣವೇ ಈ ಜಗದ ಸೊಬಗೂ ಹೌದು. ಅದು ಜೀವನಧರ್ಮವೂ ಹೌದು. ಧರ್ಮಕ್ಕೂ ನಿಯಮಕ್ಕೂ ಇರುವ ವ್ಯತ್ಯಾಸವೂ ಅದೇ ಅಲ್ಲವೇ? ಆದರೆ ವ್ಯವಸ್ಥೆ ತನಗೆ ತಾನೇ ಬಿಗಿದುಕೊಂಡ ಕಟ್ಟಳೆಗಳು ಎಲ್ಲರಿಗೂ ಒಂದೆ. ನಿಯಮಗಳಿಗೆ ಭಾವನೆಗಳಿರುವುದಿಲ್ಲ. ಕಟ್ಟಳೆಗಳಿಗೆ ಹೃದಯವಿರುವುದಿಲ್ಲ. ಅವು ನಿರ್ಜೀವ; ನಿರ್ಭಾವುಕ. ಆದರೆ ಮನುಷ್ಯ ವರ್ತನೆಗಳೂ ವ್ಯವಸ್ಥೆಯ ನಿಯಮಗಳಂತೆ ನಿರ್ಭಾವುಕ, ನಿರ್ವಿವೇಕಯುತವಾಗಿಬಿಟ್ಟರೆ?

ಅಂಥ ಸಂದರ್ಭದಲ್ಲಿ ಸಾಮೂಹಿಕ ವಿವೇಕ ಎನ್ನುವುದು ಸಾಯುತ್ತದೆ; ವಿಕೃತಿ ತಲೆದೋರುತ್ತದೆ. ಕತೆ ಸಾಯುತ್ತದೆ; ಕಟ್ಟಳೆಗಳಷ್ಟೇ ಉಳಿದುಕೊಳ್ಳುತ್ತವೆ. ಮಾನವೀಯತೆ ಸಾಯುತ್ತದೆ; ಧರ್ಮದ ಆತ್ಮಹೀನ ಅಸ್ಥಿಪಂಜರಗಳು ಕುಣಿದಾಡಲಾರಂಭಿಸುತ್ತವೆ.

ಕಥೆಗಳಲ್ಲಿ ಕುತೂಹಲ ಕಳೆದುಕೊಳ್ಳುವುದು ಇಂಥ ದುರ್ಬರ ಕಾಲಘಟ್ಟದ ಒಂದು ಲಕ್ಷಣ. ಮನುಷ್ಯನ ಯೋಚನೆಗಳು ಏಕರೂಪಗೊಂಡ, ಅನುಮಾನಗಳೇ ಸತ್ತಿರುವ ಸಮಾಜದಲ್ಲಿ ಕಥೆಗಳಿಗೆ ಜಾಗವೆಲ್ಲಿ? ಅಲ್ಲಿ ಹುಟ್ಟುವ ಕಥೆಗಳೂ ಏಕರೂಪವೇ ಆಗಿರುತ್ತವೆ. ಅವು ಹೇಗೆ ಶುರುವಾದರೂ ಮುಕ್ತಾಯ ಒಂದೇ ರೀತಿ ಆಗಿರುತ್ತದೆ. ಇಂಥ ಸೃಜನಶೀಲತೆಗೆ ಕವಿದ ಕತ್ತಲಕಾಲದಲ್ಲಿ ಕಥೆಗಾರನ ಪಾಡೇನು? ಅದೇ ಕಥೆಯನ್ನು ಅದೇ ಬಗೆಯಲ್ಲಿ ಒರೆಯುವುದೆಂದರೆ ಸೃಜನಶೀಲ ಮನಸ್ಸಿನ ಆತ್ಮಹತ್ಯೆಯೇ ಸರಿ. ಇಂಥದ್ದೇ ಒಂದು ಸನ್ನಿವೇಶದಲ್ಲಿ ಜಗತ್ತಿನ ಶ್ರೇಷ್ಠ ಕವಿಗಳಲ್ಲೊಬ್ಬನಾದ ಬ್ರೆಕ್ಟ್ ಹೇಳಿದ ಮಾತು ಹೀಗಿದೆ:

'ಕಗ್ಗತ್ತಲಕಾಲದಲ್ಲಿ ಹಾಡುವುದೂ ಉಂಟೆ?

ಹೌದು, ಹಾಡುವುದೂ ಉಂಟು

ಕಗ್ಗತ್ತಲ ಕಾಲವನ್ನು ಕುರಿತು...'



**ಹೆಸರು:** ತೂ (ಹಿಂದಿ)
ನಿರ್ದೇಶನ: ರಾಹುಲ್ ನಾಂಗಿಯಾ
**ನಿರ್ಮಾಣ:** ಇಮ್ರಾನ್ ಖಾನ್, ವಿವೇಕ್ ದಾಸ್ ಚೌಧರಿ,
**ಛಾಯಾಗ್ರಹಣ:** ಅರ್ನಬ್ ಗಯನ್
**ಸಂಗೀತ:** ರಿಯುವೆಲ್ ಬೆನೆಡಿಕ್ಟ್
**ತಾರಾಗಣ:** ಸಯಾನಿ ಗುಪ್ತ, ಅರ್ಜುನ್ ರಾಧಾಕೃಷ್ಣನ್

ಕಗ್ಗತ್ತಲ ಕಾಲದಲ್ಲಿ ಕಥೆಗಾರ ಹೇಳಬೇಕಿರುವುದು ಕಗ್ಗತ್ತಲ ಕುರಿತೇ. ಕಥೆಗಳು, ಮನುಷ್ಯ ವರ್ತನೆಗಳು ಕಟ್ಟಳೆಗಳಲ್ಲಿ ಕಟ್ಟಿಸಿಕೊಂಡು ಹೆಡೆಮುರಿ ಬಿದ್ದ ಸಂದರ್ಭದಲ್ಲಿ ಸೃಜನಶೀಲ ಮನಸ್ಸುಗಳು ಹೇಳಬೇಕಾಗಿರುವುದು ಆ ಸಂದರ್ಭದ ಕುರಿತೇ. ಅಂದಹಾಗೆ, ಈ ಕಿರುಚಿತ್ರ ಆರಂಭವಾಗುವುದೂ ಕಗ್ಗತ್ತಲ ನಡುವೆ ಸಣ್ಣಗೆ ಉರಿಯುತ್ತಿರುವ ಬೆಳಕಿನಚೆಂಡಿನ ಚಿತ್ರದೊಟ್ಟಿಗೇ!

ರಾಹುಲ್ ನಂಗಿಯಾ ನಿರ್ದೇಶನದ 'ತೂ' ಕಿರುಚಿತ್ರ, ಕತೆಯನ್ನು ಒರೆಯಲಾಗದಂಥ ಕಗ್ಗತ್ತಲ ಕಾಲದ ಕುರಿತೇ ಹೇಳಿದ ಕಥನ. ಆ ಹೇಳುವಿಕೆಯ ಕ್ರಮದಲ್ಲಿಯೇ ತನ್ನ ಕಾಲದ ಕತೆಗಳನ್ನು ಕೊಲ್ಲುತ್ತಿರುವ ಕ್ಲೀಷೆಯನ್ನು ಮೀರಿಕೊಂಡು ಮನಸೊಳಗೆ ತಲ್ಲಣದ ಬೀಜಗಳನ್ನು ಬಿತ್ತುವಂಥ ಸಶಕ್ತ ಕಿರುಚಿತ್ರ.

ಏಳು ನಿಮಿಷ ಅವಧಿಯ ಒಂದೇ ಸನ್ನಿವೇಶದಲ್ಲಿ ಮುಗಿದು ಹೋಗುವ ಈ ಕಿರುಚಿತ್ರ, ತಾನು ಹೇಳುವ ಕತೆಯನ್ನು ಅರ್ಧಕ್ಕೆ ನಿಲ್ಲಿಸಿ ಸುಮ್ಮನಾಗಿ ಬಿಡುತ್ತದೆ. ಆ ಮೌನದಲ್ಲಿರುವ 'ಈ ಕಥೆ ಹೇಗೆ ಅಂತ್ಯಗೊಳ್ಳುತ್ತದೆ ಎನ್ನುವುದು ನಿಮಗೂ ಗೊತ್ತು. ಈ ಕಾಲದಲ್ಲಿ ಇನ್ನೇನು ತಾನೇ ಆಗಲಿಕ್ಕೆ ಸಾಧ್ಯ?' ಎಂಬ ಸುಪ್ತವಾದ ತಾಪ ನಮ್ಮನ್ನು ಕಲಕುತ್ತದೆ.

ಒಂದು ರೂಮಿನಲ್ಲಿ ಪ್ರೇಮಿಗಳು ಸೇರಿದ್ದಾರೆ. ಅವರ ನಡುವೆ ಸಾಮಾನ್ಯವಾದ ಮಾತುಕತೆಗಳು ನಡೆಯುತ್ತವೆ. ಈ ಸಹಜ ಮಾತುಕತೆಗಳ ಮೂಲಕವೇ ನಿರ್ದೇಶಕರು ಆ ಪಾತ್ರಗಳ, ಅವುಗಳು ಇರುವ ದೇಶ–ಕಾಲಗಳ, ಸನ್ನಿವೇಶಗಳನ್ನು ಕಟ್ಟಿಕೊಡುವ ರೀತಿ ಇಡೀ ಚಿತ್ರಕ್ಕೆ ಸಹಜಲಯದ ಮೂಲಕವೇ ಗಾಢಕಾಡುವ ಗುಣ ಕೊಟ್ಟಿದೆ. ಹುಡುಗಿ ಹಿಂದೂ, ಹುಡುಗ ಮುಸ್ಲಿಂ. ಅವಳಿಗೆ ಬೇರೆ ಹುಡುಗನ ಜೊತೆ ಮದುವೆ ನಿಶ್ಚಯ ಆಗಿದೆ; ಹುಡುಗನಿಗೆ ಅಪ್ಪನ ಎದುರು ನಿಂತ ಈ ಹುಡುಗಿಯನ್ನು ಮದುವೆಯಾಗುತ್ತೇನೆ ಎನ್ನುವ ಧೈರ್ಯವಿಲ್ಲ. ತಮ್ಮ ಮಾಮೂಲಿ ಅಭ್ಯಾಸದಂತೆಯೇ ಅವರು ರೂಮೊಂದರಲ್ಲಿ ಸೇರಿದ್ದಾರೆ. ಆಗ ಜೋರಾಗಿ ಬಾಗಿಲು ಬಡಿದ ಸದ್ದಾಗುತ್ತದೆ. ಇಬ್ಬರೂ ಗಾಬರಿ ಬೀಳುತ್ತಾರೆ. ಹುಡುಗ 'ಸತ್ಯವನ್ನು ಹೇಳೋಣ. ಏನಾಗುತ್ತದೆಯೋ ನಾನು ಸಂಭಾಳಿಸುತ್ತೇನೆ' ಎಂದು ಹೋಗಿ ಬಾಗಿಲು ತೆರೆವಲ್ಲಿಗೆ ದೃಶ್ಯ ಕೊನೆಗೊಳ್ಳುತ್ತದೆ. ಇಂದು ಇಂಥ ಸತ್ಯ ಜಗತ್ತಿಗೆ ಹೇಳಲು ಹೊರಟ ಹುಡುಗನ ಕಥೆ ಏನಾಗುತ್ತದೆ ಎಂಬುದನ್ನು ಬೇರೆ ಹೇಳಬೇಕಿಲ್ಲ ತಾನೆ?

ಕೊನೆ ಸನ್ನಿವೇಶದಲ್ಲಿ ಹುಡುಗ ಹುಡುಗಿ ಇಬ್ಬರೂ ಎದ್ದು ಪ್ರಾಣಭಯದಲ್ಲಿ ನಡುಗುತ್ತಿರುತ್ತಾರೆ. ಅವರ ಮಾತುಗಳು ಮಾತ್ರ ಮೊದಲಿನಷ್ಟೇ ಸಹಜವಾಗಿರುತ್ತವೆ. ಈ ಶರೀರ ಮತ್ತು ಶಾರೀರದ ಟೋನ್‌ಗಳ ನಡುವೆ ನಿರ್ದೇಶಕರು ಉದ್ದೇಶಪೂರ್ವಕವಾಗಿ ಅಂತರ ಸೃಷ್ಟಿಸಿದ್ದಾರೆ. ಈ ಅಂತರವೇ, ಈ ಸಮಾಜದ ವಿಕೃತಿ ಮನುಷ್ಯದೇಹದ ಮೇಲೆ ದಾಳಿ ಮಾಡಬಹುದೇ ಹೊರತು ಆತ್ಮಗಳ ಸಹಜ ಸಂಗಾತವನ್ನು ತಡೆಯಲು ಸಾಧ್ಯವಿಲ್ಲ ಎನ್ನುವುದನ್ನು ಗಾಢವಾಗಿ ಧ್ವನಿಸುತ್ತವೆ.

ಈ ಕಿರುಚಿತ್ರ ವೀಕ್ಷಣೆಗೆ **bit.ly/2N4Bq11** ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.